**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**

**ಸಿ.ಸಿ. ಸಂಖ್ಯೆ: 139/2018**

ಫಿರ್ಯಾದಿ : ಬಿ ಎಂ ಮಾಲೇಗೌಡ ಬಿನ್ ಮುದ್ದೇಗೌಡ, 60 ವರ್ಷ,
ಬಂಚಳ್ಳಿಹುಂಡಿ ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ
ನಂಜನಗೂಡು ತಾಲ್ಲೂಕು.

ವಿರುದ್ಧ

ಆರೋಪಿ : ರಘು ಜಿ ಬಪಿನ್ ಗನಸೋಮಚಾರಿ, 29 ವರ್ಷ,
ಟಿ ನಂ.533, ನೌಕರ,
ಸೌತ್ ಇಂಡಿಯಾ ಪೇಪರ್ ಮಿಲ್,
ಚಿಕ್ಕಯ್ಯನಛತ್ರ, ತಾಂಡವಪುರ, ನಂಜನಗೂಡು ತಾಲ್ಲೂಕು.

: ಆರೋಪಣೆ :

ವಿನುತಾ.ಡಿ.ಎಸ್ ಬಿ.ಎಸ್‌ಸಿ (ಸೆರಿ), ಎಲ್‌ಎಲ್‌ಬಿ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೇ:

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಫಿರ್ಯಾದುದಾರರನ್ನು 2016 ನೇ ಇಸವಿ ಜೂನ್ ತಿಂಗಳಿನ ಮೊದಲ ವಾರದಲ್ಲಿ ಭೇಟಿ ಮಾಡಿ ರೂ.2,00,000/- ಗಳನ್ನು ಕೈಸಾಲವಾಗಿ ಪಡೆದುಕೊಂಡು, ಸದರಿ ಮೊಬಲಗನ್ನು 04 ತಿಂಗಳೊಳಗಾಗಿ ಮರುಮರುಪಾವತಿ ಮಾಡುವುದಾಗಿ ಒಪ್ಪಿರುತ್ತೀರಿ, ಸದರಿ ಮೊಬಲಗನ್ನು ಮರುಪಾವತಿ ಮಾಡದೇ ಇದ್ದಾಗ ಫಿರ್ಯಾದುದಾರರು ಹಣವನ್ನು ಹಿಂತಿರುಗಿಸುವಂತೆ ಕೇಳಿಕೊಂಡಾಗ ಆರೋಪಿಯಾದ ನೀವು ಉಳಿತಾಯ ಖಾತೆ ಹೊಂದಿರುವ ಐ ಸಿ ಐ ಸಿಐ ಬ್ಯಾಂಕ್, ರಾಮವಿಲಾಸ ರಸ್ತೆ, ಮೈಸೂರು ಶಾಖೆಯ ಚೆಕ್ ನಂ 001602 ಕ್ಕೆ ರೂ.2,00,000/- ಗಳನ್ನು ದಿನಾಂಕ:19.10.2016 ಎಂದು ನಮೂದಿಸಿ ಫಿರ್ಯಾದುದಾರರ ಕೈಗೆ ನೀಡಿದ್ದು, ತದನಂತರ ಫಿರ್ಯಾದುದಾರರು ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು ತಮ್ಮ ಉಳಿತಾಯ ಖಾತೆಯಿರುವ ವಿಜಯಾ ಬ್ಯಾಂಕ್, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು "ಅಕೌಂಟ್ ಕ್ಲೋಸಡ್"

ಎಂಬ ಹಿಂಬರಹದೊಂದಿಗೆ ದಿ:26.10.2016 ರಂದು ನಗದೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.15.11.2016 ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಖುದ್ದು ಜಾರಿಯಾಗಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಅಪಾದನೆಯನ್ನು ಕೇಳಿದ್ದೀರಾ?

ಉತ್ತರ : ಕೇಳಿದೆ.

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?

ಉತ್ತರ : ಇಲ್ಲ. ಪ್ರತಿರಕ್ಷೆ ಮಾಡಿಕೊಳ್ಳುತ್ತೇನೆ.

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 08.04.2021 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).

9/4/21.

2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

Raghu-G.